# ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆಃ 117/2026

| | | | |
|---|---|---|---|
| **ದಿನಾಂಕಃ 07.04.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
| ಸಿಡಬ್ಲ್ಯೂಃ | 20 | ಪಿಡಬ್ಲ್ಯೂ | 9 |
| ಹೆಸರು | ಮೆಹಬೂಬ್ ಪಾಶ | | |
| ತಂದೆ / ಗಂಡನ ಹೆಸರು | ಅಬ್ದುಲ್ ಗಫರ್ | | |
| ವಯಸ್ಸು | 50 | | |
| ಉದ್ಯೋಗ | ಎ.ಎಸ್.ಐ. | | |
| ವಾಸ | ತುಮಕೂರು | | |

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಾನು ದಿಃ10.07.2023 ರಿಂದ ದಿಃ10.07.2024 ರ ವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ಮಾಡಿರುತ್ತೇನೆ.

2. ದಿಃ20-10-2023 ರ ಸಂಜೆ 5.00 ಗಂಟೆ ಸಮಯದಲ್ಲಿ ಠಾಣ ಕರ್ತವ್ಯದಲ್ಲಿ ಇರುವಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಬೆರಳಚ್ಚು ದೂರನ್ನು ಪಡೆದು ಪರಿಶೀಲಿಸಿ ಹಾಲಿ ಪ್ರಕರಣದಂತೆ ಪ್ರ.ವ.ವ.ನ್ನು ಸಲ್ಲಿಸಿರುತ್ತೇನೆ. ಸದರಿ ಪ್ರ.ವ.ವ.ನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ನಿವೇದಿಸಿರುತ್ತೇನೆ. ದಿಃ21-10-2023 ರಂದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 12 ರಿಂದ 15 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ರವರೆಗೆ ಮಾಡಿರುತ್ತೇನೆ. ಚಾಸಾ 13 ಮತ್ತು 15 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ವಾಹನಗಳಾದ ಲಾರಿ ಸಂ.ಎಲ್.ಎನ್.01.ಎಇ.4996 ಮತ್ತು ಕೆ.ಎಸ್.ಆರ್.ಟಿ.ಸಿ. ವಾಹನ ಸಂ.ಕೆಎ.17.ಎಫ್.1997 ನ್ನು ಠಾಣ ಆವರಣದಲ್ಲಿ ಅಮಾನತ್ತು ಪಡಿಸಿಕೊಂಡು ಅಮಾನತ್ತು ಪಂಚನಾಮೆಯನ್ನು ಚಾಸಾ 12 ಮತ್ತು 14 ರ ಸಮಕ್ಷಮ ಜೊತೆಗೆ

ಭಾವಚಿತ್ರಗಳನ್ನು ತೆಗೆದು ಪಂಚನಾಮೆ ಮಾಡಿರುತ್ತೇನೆ. ದಿಃ21-10-2023 ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. 2 ವಾಹನಗಳನ್ನು ತಪಸಣೆ ಮಾಡಲು IMV ಅಧಿಕಾರಿಗಳಿಗೆ ಮನವಿ ಮಾಡಿ ತಪಸಣೆ ಮಾಡಿ ನೀಡಿದ ವರಿದಿಯನ್ನು ಪಡೆದಿರುತ್ತೇನೆ. ನಂತರ ಇಂಡಿಮಿನಿಟಿ ಬಾಂಡ್ ಪಡೆದು 2 ವಾಹನಗಳ ಮಾಲೀಕನಿಗೆ ಬಿಡುಗಡೆ ಮಾಡಿರುತ್ತೇನೆ. ಚಾಸಾ 2 ರಿಂದ 9 ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ಹಿರಿಯೂರು ವೈದ್ಯಾಧಿಕಾರಿಗಳಿಗೆ ಮನವಿ ಮಾಡಿರುತ್ತೇನೆ. ಚಾಸಾ 2 ರಿಂದ 9 ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ಚಾಸಾ 1 ರವರನ್ನು ವಿಚಾರಣೆ ಮಾಡಿ ಮರು ಹೇಳಿಕೆ ಪಡೆದಿರುತ್ತೇನೆ. ದಿಃ04-11-2023 ರಂದು ಚಾಸಾ 2 ರಿಂದ 9 ರವರ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ. ಹಾಲಿ ಪ್ರಕರಣದಲ್ಲಿ ತನಿಖೆ ಪೂರೈಸಿ ದಿಃ05-11-2023 ರಂದು ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

3. ಸಾಕ್ಷಿಯು ನಿಪಿ.4 ರ ಇಂಡಿಮಿನಿಟಿ ಬಾಂಡ್ ನಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ., ದೂರು, 2 ಪಂಚನಾಮೆಗಳು, ಇಂಡಿಮಿನಿಟಿ ಬಾಂಡ್, ಐ.ಎಂ.ವಿ. ವರದಿ, 8 ಗಾಯದ ಪ್ರಮಾಣ ಪತ್ರ, 5 ಭಾವಚಿತ್ರಗಳ ದಾಖಲೆಗಳನ್ನು ಮತ್ತು ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿಪಿ-5 ರಿಂದ ನಿಪಿ-24 ಎಂದು ಸಾಕ್ಷಿ ಸಹಿಯನ್ನು ನಿಪಿ-5(ಎ) ರಿಂದ ನಿಪಿ-20(ಎ), 22(ಎ) ಮತ್ತು 24(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಪಿ.ಎಸ್. ವಕೀಲರಿಂದಃ</u>**

ನಾನು ಹೇಳಿದಂತೆ ದಿಃ20-10-2023 ರಂದು ಯಾವುದೇ ವಾಹನ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ 2 ರಿಂದ 9 ರವರೆಗೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಿಪಿ-11 ರಿಂದ 14 ರ ಗಾಯದ ಪ್ರಮಾಣ ಪತ್ರದಲ್ಲಿ ರಸ್ತೆ ಅಪಘಾತವು ದಿಃ20-11-2023 ರಂದು ಸಂಭವಿಸಿರುತ್ತದೆ ಎಂದರೆ ವೈದ್ಯರ ಕೈ ತಪ್ಪಿನಿಂದ ಬರೆದಿರುತ್ತಾರೆ ಮತ್ತು ಅಪಘಾತ ದಿಃ20-10-2023 ರಂದು ಆಗಿರುತ್ತದೆ ಎಂದು ಬರೆದಿರುತ್ತಾರೆ. ನಾನು ಹೇಳಿದಂತೆ ಪಂಚನಾಮೆ ಮತ್ತು

ಅಮಾನತ್ತು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಮಾಡಲು ನಾನು ಮತ್ತು ಸಾಕ್ಷಿದಾರರು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಮೊದಲ ಬಾರಿಗೆ ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪಾರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.